**ಸಿ ಸಿ ಸಂ.797/2020**

ಪಿ .ಡಬ್ಲ್ಯೂ-1

ದಿನಾಂಕ 27-07-2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ವಾಯ್ ಬಿ ವಕೀಲರಿಂದ ಃ-**

ನನ್ನ ವಿರುದ್ದ ಲಂಚ ತೆಗೆದುಕೊಂಡ ಆರೋಪಿ ಇರುವ ಪಿರ್ಯಾದಿ ಇರುತ್ತದೆ ಎಂದರೆ ಸರಿಯಲ್ಲ .ನಿಪಿ-1 ನ್ನು ಆರೋಪಿ ಖುದ್ದಾಗಿ ಚೇರಮನ್ ಇವರಿಗೆ ನನ್ನ ವಿರುದ್ದ ನೀಡಿದ್ದರು ಎಂದರೆ ನನಗೆ ಅದರ ಮಾಹಿತಿ ಪ್ರಿನ್ಸಿಪಾಲ ಇವರು ವಿವರಣೆ ಕೇಳಿದಾಗ ಗೊತ್ತಾಗಿರುತ್ತದೆ . ನಿಪಿ-1 ರ ದೂರಿನ ಪ್ರತಿಯನ್ನು ಆರೋಪಿ ಪ್ರಿನ್ಸಿಪಾಲ ಇವರಿಗೆ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ .ನಿಪಿ-1 ನ್ನು ಪ್ರಿನ್ಸಿಪಾಲ ಆದ ಜಿ ಆರ್ ಜುನಾಯಕ ಇವರು ನಿಪಿ-1 ನ್ನು publish ಮಾಡಿದ್ದು ಆರೋಪಿತರು ಮಾಡಿರುವದಿಲ್ಲ ಎಂದರೆ ಸಾಕ್ಷಿ ಪ್ರಿನ್ಸಿಪಾಲ ಆದ ಜಿ ಆರ್ ಜುನಾಯಕ ಇವರು ಮಾಡಿರುವದಿಲ್ಲ ಎಂದು ಹೇಳುತ್ತಾರೆ . ನಾನು ಆರೋಪಿ ವಿರುದ್ದ ಅಸಲು ದಾವಾ ನಂಬರ 27/2022 ನ್ನು ದಾಖಲಿಸಿದ್ದೇನೆಂದರೆ ಸರಿ. ಆರೋಪಿಯಿಂದ ರೂಃ 50 ಲಕ್ಷ ಹಣ ಪಡೆಯಲು ಸುಳ್ಳು ಪಿರ್ಯಾದಿ ಸಲ್ಲಿಸಿದ್ದೇನೆಂದರೆ ಸರಿಯಲ್ಲ . ಆರೋಪಿ ನನ್ನ ವಿರುದ್ದ ಲೋಕಾಯುಕ್ತ ಕಚೇರಿಗೆ ಅಥವಾ ಪೋಲಿಸ ಠಾಣೆಗೆ ಲಂಚದ ಕುರಿತಾಗಿ ದೂರನ್ನು ಸಲ್ಲಿಸಿರುವದಿಲ್ಲ ಎಂದರೆ ನನಗೆ ಗೊತ್ತಿಲ್ಲ . ನಾನು ಆರೋಪಿಯ ವಿರುದ್ದ ದುರುದ್ದೇಶದಿಂದ ತಪ್ಪು ಮಾಹಿತಿ ನೀಡಿ ದೂರನ್ನು ಸಲ್ಲಿಸಿದ್ದು ಅವು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ .

ಮರು ವಿಚಾರಣೆಃ- ಇಲ್ಲಾ .

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.